ಸಂಚಿಕೆ 15

# ಜಲ ಸಂಪದ

## ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮ
## ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ ವಾರ್ತಾಪತ್ರ

ಮಾರ್ಚ್–ಏಪ್ರಿಲ್ 2023 | ಹೇಮಂತ–ಶಿಶಿರ ಋತು ಫಾಲ್ಗುಣ–ಚೈತ್ರ–ವೈಶಾಖ | ಖಾಸಗಿ ಪ್ರಸಾರಕ್ಕಾಗಿ



ಕಂಪ್ಲಿ ಮುಖ್ಯ ಕಾಲುವೆ ವೀಕ್ಷಿಸುತ್ತಿರುವ ಎಡಿಬಿ ತಂಡ, 18.4.2023

## ಈ ಸಂಚಿಕೆಯಲ್ಲಿ


- ಎಡಿಬಿ ಮಧ್ಯಕಾಲಿಕ ಪ್ರಗತಿ ಪರಿಶೀಲನಾ ಸಭೆ
- ಪ್ಯಾಕೇಜ್ 2ರ ಕಾಮಗಾರಿಗಳ ಕುರಿತು ಚರ್ಚೆ
- ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾಮಗಾರಿಗಳ ಪ್ಯಾಕೇಜುಗಳಿಗೆ ಸಹಿ
- ಕಾಡಾ ಕಾಮಗಾರಿ ಅನುಷ್ಠಾನದ ತರಬೇತಿ
- ವಿಭಿನ್ನವಾಗಿ ನಡೆದ ಮಹಿಳಾ ದಿನಾಚರಣೆ
- ವೇಸ್ಟ್ ಡಿಕಂಪೋಸರ್‌ಬಹು ಉಪಯೋಗಿ ಮತ್ತು ಕಡಿಮೆ ವೆಚ್ಚ
- ಫೋಟೋ ಆಲ್ಬಂ . . . ಇತ್ಯಾದಿ

# ಸಂಪಾದಕೀಯ



**ಶ್ರೀ ದುರುಗಪ್ಪ ಕೆ.**
ಮುಖ್ಯ ಇಂಜಿನಿಯರ್,
ನೀರಾವರಿ ಕೇಂದ್ರ ವಲಯ,
ಮುನಿರಾಬಾದ್

ಮಾರ್ಚ್ 2023ರಲ್ಲಿ ವಿಜಯನಗರ ಕಾಲುವೆಗಳ ಪ್ಯಾಕೇಜ್ 2ರ ಅಡಿಯಲ್ಲಿ ಬರುವ ಕಾಮಗಾರಿಗಳಿಗೆ ಅನುಮೋದನೆ ದೊರೆತು ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದ್ದು ಕಾರ್ಯಾದೇಶ ಪತ್ರ ನೀಡಲಾಗಿದೆ. ಸದರಿ ಪ್ಯಾಕೇಜ್ ಅಡಿಯಲ್ಲಿ ತುರ್ತಾ ಕಾಲುವೆ ಹಾಗೂ 8 ಅಣೆಕಟ್ಟುಗಳ ಆಧುನೀಕರಣ ಕಾಮಗಾರಿಗಳು ಬರುತ್ತವೆ. ಎಡದಂಡೆಯಲ್ಲಿ ಹುಲಿಗಿ, ಸಣಾಪುರ (ಆನೆಗುಂದಿ ಕಾಲುವೆ), ಗಂಗಾವತಿ ಮೇಲಣ ಮತ್ತು ಕೆಳಗಣ ಮತ್ತು ಬಲದಂಡೆಯಲ್ಲಿ ಹೊಸೂರು, ತುರ್ತಾ, ರಾಮಸಾಗರ ಹಾಗೂ ಕಂಪ್ಲಿ ಅಣೆಕಟ್ಟುಗಳ ಆಧುನೀಕರಣ ಆಗಲಿದೆ.

ಈ ಕಾಲುವೆ ಮತ್ತು ಅಣೆಕಟ್ಟುಗಳು ನೀರು ನಾಯಿ ಸಂರಕ್ಷಣಾ ಪ್ರದೇಶ, ದರೋಜಿ ಕರಡಿ ಧಾಮ ಮತ್ತು ಹಂಪಿ ವಿಶ್ವ ಪರಂಪರೆ ಪ್ರದೇಶಗಳ ಸಂರಕ್ಷಣಾ ವ್ಯಾಪ್ತಿಯಲ್ಲಿ ಬರುತ್ತಿರುವುದರಿಂದ, ಸೂಕ್ತ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು ಕಾಮಗಾರಿ ನಿರ್ವಹಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಇದಕ್ಕೆ ಪೂರಕವಾಗಿ ಸಂಬಂಧಪಟ್ಟ ವಿವಿಧ ಇಲಾಖೆಗಳೊಂದಿಗೆ ಸರಣಿ ಸಭೆಗಳನ್ನು ನಡೆಸಿ ಚರ್ಚಿಸಲಾಗುತ್ತಿದೆ. ಗುತ್ತಿಗೆದಾರರು ಈ ಎಲ್ಲಾ ಅಣೆಕಟ್ಟುಗಳ ಬಗ್ಗೆ ವೀಡಿಯೋ ಚಿತ್ರೀಕರಣ ಮಾಡಿದ್ದಾರೆ.

ಏಪ್ರಿಲ್ ತಿಂಗಳಲ್ಲಿ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ತಂಡವು ದಿನಾಂಕ 17ರಿಂದ 21ನೇ ಏಪ್ರಿಲ್ 2023ರವರೆಗೆ ಮಧ್ಯಕಾಲಿಕ ಪ್ರಗತಿ ಪರಿಶೀಲನೆ ನಡೆಸಿತು. ಈ ಸಂದರ್ಭದಲ್ಲಿ ಪ್ಯಾಕೇಜ್ 1 ಮತ್ತು 2ರ ವಿವಿಧ ಸಿವಿಲ್ ಕಾಮಗಾರಿಗಳ ವೀಕ್ಷಣೆ, ನೀರು ಬಳಕೆದಾರರ ಸಹಕಾರ ಸಂಘದ ಸದಸ್ಯರೊಂದಿಗೆ ಚರ್ಚೆ, ಕೃಷಿ ಪ್ರಾತ್ಯಕ್ಷಿಕೆ ತಾಕುಗಳು ಮತ್ತು ಫಲಾನುಭವಿ ರೈತರೊಂದಿಗೆ ಸಂವಾದ ನಡೆಸಲಾಯಿತು. ಕಾಮಗಾರಿಗಳಿಗೆ ವೇಗ ನೀಡಲು ತಂಡವು ಸಲಹೆ ನೀಡಿದ್ದು ಅದಕ್ಕಾಗಿ ಕಾರ್ಯತಂತ್ರಗಳನ್ನು ರೂಪಿಸಲಾಗುತ್ತಿದೆ.

ಇದು ಜಲಸಂಪದ ವಾರ್ತಾಪತ್ರದ 15ನೇ ಸಂಚಿಕೆ. ಓದಿ, ನಿಮ್ಮ ಅಭಿಪ್ರಾಯಗಳನ್ನು ತಿಳಿಸಲು ಮನವಿ.



ಎಡಿಬಿ ಮಧ್ಯಕಾಲಿಕ ಪ್ರಗತಿ ಪರಿಶೀಲನಾ ತಂಡ



ಮುಖ್ಯ ಇಂಜಿನಿಯರ್ ಅವರ ಕಛೇರಿ, ಮುನಿರಾಬಾದ್‌ನಲ್ಲಿ ಎಡಿಬಿ ಮಧ್ಯಕಾಲಿಕ ಪ್ರಗತಿ ಪರಿಶೀಲನೆ, ದಿ. 17.4.2023

# ಕಾಡಾ ಕಾಮಗಾರಿಗಳಿಗೆ ವೇಗ



**ಶ್ರೀ ದೊರೈಸ್ವಾಮಿ ಆರ್.**
ಟೀಮ್ ಲೀಡರ್,
ಯೋಜನಾ ಸಹಾಯಕ
ಸಮಾಲೋಚಕ ತಂಡ,
ಇಜಿಐಎಸ್

ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾಮಗಾರಿಗಳಿಗೆ (ಕಾಡಾ ಕಾಮಗಾರಿ) ವಿಶೇಷ ಮಹತ್ವವಿದೆ. ಸಮುದಾಯ ಸಹಭಾಗಿತ್ವದಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳೇ ಈ ಕಾಮಗಾರಿಗಳನ್ನು ನಿರ್ವಹಿಸುವುದು ಮುಖ್ಯ ವೈಶಿಷ್ಟ್ಯವಾದರೆ, ಮಡಿಗಾಲುವೆಗಳ ಜಾಲವನ್ನು ಸಿಮೆಂಟ್ ಲೈನಿಂಗ್ ಮಾಡಿ ನೀರಿನ ಪೋಲು ತಡೆಯುವ ಮೂಲಕ ಪರಿಣಾಮಕಾರಿ ನೀರು ನಿರ್ವಹಣೆ ಹಾಗೂ ಕೃಷಿ ಉತ್ಪಾದಕತೆ ವೃದ್ಧಿಗೆ ಬಲ ನೀಡುವುದು ಈ ಕಾಮಗಾರಿಗಳ ಮತ್ತೊಂದು ವೈಶಿಷ್ಟ್ಯ.

ಕಾಡಾ ಕಾಮಗಾರಿಗಳ ಅನುಷ್ಠಾನದಲ್ಲಿ ಹಲವು ಹಂತಗಳಿವೆ. ಮೊದಲನೆಯದಾಗಿ ಎಲ್ಲಾ ಮಡಿಗಾಲುವೆಗಳ ಸರ್ವೆ ಮಾಡಬೇಕು. ಇದಕ್ಕಾಗಿ ಪ್ರತ್ಯೇಕ ತಂಡವನ್ನೇ ನಿಯೋಜಿಸಲಾಗಿದೆ. ಈ ತಂಡವು ನೀರು ಬಳಕೆದಾರರ ಸಹಕಾರ ಸಂಘಗಳ ಪದಾಧಿಕಾರಿಗಳು ಮತ್ತು ಸ್ಥಳೀಯ ರೈತರ ಜೊತೆಗೂಡಿ ಸರ್ವೆ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಇದಾದ ಬಳಿಕ ಅಂದಾಜು ಪಟ್ಟಿ ತಯಾರಿಸಬೇಕು, ಸಂಘಗಳಿಂದ ಒಪ್ಪಿಗೆ ಪತ್ರ ಪಡೆಯಬೇಕು. ನಿಗಮದಿಂದ ತಾಂತ್ರಿಕ ಅನುಮೋದನೆ ಹಾಗೂ ಎಡಿಬಿ ವತಿಯಿಂದ ಅನುಮೋದನೆ ದೊರೆತ ನಂತರ ಸಂಘಗಳೊಂದಿಗೆ ಒಪ್ಪಂದ ಪತ್ರ ಮಾಡಿಕೊಳ್ಳಲಾಗುವುದು.



ಇದಾದ ಬಳಿಕ ಸಂಘಗಳಿಗೆ ಕಾಡಾ ಕಾಮಗಾರಿ ನಿರ್ವಹಣೆ ಕುರಿತು ತರಬೇತಿಗಳನ್ನು ಹಮ್ಮಿಕೊಳ್ಳಲಾಗುವುದು. ಈ ತರಬೇತಿಗಳಲ್ಲಿ ಕಾಡಾ ಕಾಮಗಾರಿಗಳ ಮಹತ್ವ, ಅನುಷ್ಠಾನ ವಿಧಾನ, ಗುಣಮಟ್ಟ ಕಾಯ್ದುಕೊಳ್ಳುವುದು, ಪಾವತಿ ಹಂತಗಳು ಮತ್ತು ಅದರ ಪ್ರಕ್ರಿಯೆ, ಸಾಮಗ್ರಿಗಳ ಖರೀದಿ ವಿಧಾನ ಮುಂತಾದ ಹಲವು ಅಂಶಗಳ ಕುರಿತು ತಜ್ಞರಿಂದ ಮಾಹಿತಿ ಒದಗಿಸಲಾಗುತ್ತಿದೆ. ಅಲ್ಲದೆ, 25 ಸಂಘಗಳ ಪದಾಧಿಕಾರಿಗಳಿಗೆ ಗೊಂದಿ ಯೋಜನೆಗೆ ಅಧ್ಯಯನ ಪ್ರವಾಸ ನಡೆಸಿ ಸಂಘಗಳು ಮಾಡಿ ನಿರ್ವಹಿಸುತ್ತಿರುವ ಹೊಲಗಾಲುವೆಗಳ ಕಾಮಗಾರಿಗಳನ್ನು ತೋರಿಸಲಾಗಿದೆ.

| | ಚಟುವಟಿಕೆಗಳು | ಪ್ರಗತಿ |
|---|---|---|
| 1 | ಒಟ್ಟು ಸಂಘಗಳು | 29 |
| 2 | ಒಟ್ಟು ಕ್ಯಾಡ್ ಪ್ಯಾಕೇಜುಗಳು | 599 |
| 3 | ಮಡಿಗಾಲುವೆಗಳ ಸರ್ವೆ ಆಗಿರುವುದು (ಕಿ.ಮೀ.,) | 250 |
| 4 | ಅಂದಾಜು ಪಟ್ಟಿ ತಯಾರಿಸಿರುವುದು | 125 |
| 5 | ಎಡಿಬಿಯಿಂದ ಅನುಮೋದನೆಗೊಂಡಿರುವುದು | 115 |
| 6 | ನಿಗಮದಿಂದ ತಾಂತ್ರಿಕ ಅನುಮೋದನೆಗೊಂಡಿರುವುದು | 115 |
| 7 | ಸಂಘಗಳಿಗೆ ಅವಾರ್ಡ್ ಆಗಿರುವುದು | 115 |
| 8 | ಅವಾರ್ಡ್ ಆಗಿರುವ ಪ್ಯಾಕೇಜುಗಳ ಮೊತ್ತ | 26.43 ಕೋಟಿ |
| 9 | ಕಾಡಾ ಕಾಮಗಾರಿ ನಿರ್ವಹಣೆ ತರಬೇತಿ ಪಡೆದಿರುವ ಸಂಘಗಳು | 18 |
| 10 | ಗೊಂದಿ ಅಧ್ಯಯನ ಪ್ರವಾಸ ಮುಗಿಸಿದ ಸಂಘಗಳು | 25 |

ಮೇಲಿನ ಎಲ್ಲಾ ಹಂತಗಳಲ್ಲಿ ಏಪ್ರಿಲ್ ಅಂತ್ಯದವರೆಗೆ ಆಗಿರುವ ಪ್ರಗತಿಯನ್ನು ಇಲ್ಲಿರುವ ಕೋಷ್ಟಕದಲ್ಲಿ ನೀಡಲಾಗಿದೆ.

ಉಳಿದ ಪ್ಯಾಕೇಜುಗಳಿಗೂ ಸಹ ಈ ಪ್ರಕ್ರಿಯೆಯು ವಿವಿಧ ಹಂತಗಳಲ್ಲಿದ್ದು ಕಾಲಮಿತಿಯಲ್ಲಿ ಪ್ರಗತಿ ಸಾಧಿಸಲು ಕಾರ್ಯಯೋಜನೆ ರೂಪಿಸಲಾಗಿದೆ. ಎಲ್ಲರ ಸಹಕಾರದೊಂದಿಗೆ ನಿಗದಿತ ಗುರಿಯನ್ನು ತಲುಪುವ ವಿಶ್ವಾಸವಿದೆ.

# ಎಡಿಬಿ ತಂಡದ ಮಧ್ಯಕಾಲಿಕ ಪ್ರಗತಿ ಪರಿಶೀಲನಾ ಸಭೆ

ದಿನಾಂಕ 17ರಿಂದ 21ನೇ ಏಪ್ರಿಲ್ 2023ರವರೆಗೆ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ತಂಡದಿಂದ ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯ ಮಧ್ಯಕಾಲಿಕ ಪ್ರಗತಿ ಪರಿಶೀಲನಾ ಸಭೆಯು ನಡೆಯಿತು. ತಂಡವು ಶ್ರೀ ರಾಜೇಶ್ ಯಾದವ್, ಪರಿಶೀಲನಾ ತಂಡದ ನಾಯಕರು, ಶ್ರೀ ಬಾಡೋಫೆಂಗ್ ಛನ್ನಾವತ್, ಶ್ರೀ ಗಿರೀಶ್ ಮಹಾಜನ್, ಶ್ರೀ ಅಮಿತ್ ಪಾಂಡೆ ಅವರನ್ನು ಒಳಗೊಂಡಿತ್ತು. ಶ್ರೀ ಲ್ಯಾನ್ಸ್ ಗೋರ್ ಅವರು ಆನ್ ಲೈನ್ ಮೂಲಕ ಸಭೆಯಲ್ಲಿ ಪಾಲ್ಗೊಂಡಿದ್ದರು.

ದಿನಾಂಕ 17.4.2023 ರಂದು ನೀರಾವರಿ ಕೇಂದ್ರ ವಲಯ, ಮುನಿರಾಬಾದ್ ಇವರ ಕಛೇರಿಯಲ್ಲಿ ಸಭೆ ನಡೆಯಿತು. ಮುಖ್ಯ ಇಂಜಿನಿಯರ್ ಅವರು ಎಲ್ಲರಿಗೂ ಸ್ವಾಗತ ಕೋರಿ ಎಡಿಬಿ ತಂಡದ ಸದಸ್ಯರ ಮೂರು ದಿನಗಳ ಭೇಟಿಯ ಉದ್ದೇಶ, ಗಮನಹರಿಸುವ ಮತ್ತು ಚರ್ಚಿಸುವ ವಿಷಯಗಳು ಹಾಗೂ ಕ್ಷೇತ್ರ ಭೇಟಿಯ ಬಗ್ಗೆ ತಿಳಿಸಿದರು.

ಪಿ.ಎಸ್.ಸಿ ಟೀಮ್ ಲೀಡರ್ ಅವರು ಯೋಜನೆಯ ಪ್ಯಾಕೇಜ್ 1 ಮತ್ತು 2ರ ಈವರೆಗಿನ ಒಟ್ಟಾರೆ ಭೌತಿಕ ಮತ್ತು ಹಣಕಾಸು ಪ್ರಗತಿಯನ್ನು ಮಂಡಿಸಿದರು. ಪ್ಯಾಕೇಜ್ 1 ಮತ್ತು 2ರ ಗುತ್ತಿಗೆದಾರರಿಂದ ಪ್ರಗತಿಯ ಕುರಿತು ಹಲವು ಮಾಹಿತಿಗಳನ್ನು ಪಡೆಯಲಾಯಿತು. ಪ್ಯಾಕೇಜ್ 2ರ ಅಡಿಯಲ್ಲಿ ಕೈಗೊಳ್ಳುತ್ತಿರುವ 8 ಅಣೆಕಟ್ಟುಗಳ ಯೋಜನಾ ಪೂರ್ವದ ಸ್ಥಿತಿ–ಗತಿಯನ್ನು ವೀಡಿಯೋ ಮೂಲಕ ದಾಖಲಿಸಿದ್ದು, ಅವುಗಳಲ್ಲಿ ರಾಮಸಾಗರ ಮತ್ತು ತುರ್ತಾ ಅಣೆಕಟ್ಟುಗಳ ವೀಡಿಯೋಗಳನ್ನು ತೋರಿಸಲಾಯಿತು.



ಆನೆಗುಂದಿ ಕಾಲುವೆ ವೀಕ್ಷಣೆ

ಮಧ್ಯಾಹ್ನದ ನಂತರ ತುಂಗಭದ್ರಾ ಎಡದಂಡೆ ನಾಲೆಯ ದಾಸನಾಳ ಗ್ರಾಮದ ಬಳಿ ವಿತರಣಾ ನಾಲೆ 17ರಲ್ಲಿ ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರವು (ಎಸಿಐಡಬ್ಲ್ಯುಆರ್‌ಎಂ) ಕೈಗೊಂಡಿರುವ ನೆಲ ಮತ್ತು ಜಲ ನಿರ್ವಹಣಾ ಪ್ರಾಯೋಗಿಕ ಯೋಜನೆಯಡಿ ಅಳವಡಿಸಿಕೊಂಡಿರುವ ನೀರಿನ ಹರಿವು ಅಳತೆ ಮಾಪಕಗಳು ಮತ್ತು ಸುಸ್ಥಿರ ಕೃಷಿ ಚಟುವಟಿಕೆಗಳನ್ನು ವೀಕ್ಷಿಸಲಾಯಿತು. ಜೊತೆಗೆ ಸ್ಥಳಿಯ ನೀರು ಬಳಕೆದಾರರ ಸಹಕಾರ ಸಂಘದ ಜೊತೆಗೆ ಯೋಜನೆಯ ಚಟುವಟಿಕೆಗಳ ಕುರಿತು ಸಮಾಲೋಚನೆ ನಡೆಸಲಾಯಿತು.

ನಂತರ ಆನೆಗುಂದಿ ಪ್ಯಾಕೇಜ್ 1ರ ಅಡಿಯಲ್ಲಿ ಅಂಜನಾದ್ರಿ ಬೆಟ್ಟದ ಬಳಿ ನಡೆಯುತ್ತಿರುವ ಮುಖ್ಯ ಕಾಲುವೆಯ ಆಧುನೀಕರಣ ಕಾಮಗಾರಿಗಳು, ಅಳವಡಿಸಿಕೊಂಡ ಸಾಮಾಜಿಕ ಮತ್ತು ಪರಿಸರ ಸುರಕ್ಷತಾ ಕ್ರಮಗಳನ್ನು ವೀಕ್ಷಿಸಲಾಯಿತು. ಈ ಸಂದರ್ಭದಲ್ಲಿ ಗುತ್ತಿಗೆದಾರರು, ನೀರು ಬಳಕೆದಾರರ ಸಹಕಾರ ಸಂಘದ ಸದಸ್ಯರು, ಅಚ್ಚುಕಟ್ಟಿನ ರೈತರು ಹಾಜರಿದ್ದರು. ಇದಾದ ಬಳಿಕ ಪ್ಯಾಕೇಜ್ 2ರಲ್ಲಿ ಆಧುನೀಕರಣಕ್ಕಾಗಿ ತೆಗೆದುಕೊಂಡಿರುವ ಸಣಾಪುರ ಅಣೆಕಟ್ಟಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು.

ದಿನಾಂಕ 18.4.2023 ರಂದು ಬೆಳಗಿನ ಅವಧಿಯಲ್ಲಿ ಪ್ಯಾಕೇಜ್ 2ರಲ್ಲಿ ಕೈಗೊಳ್ಳುತ್ತಿರುವ ಬಲದಂಡೆಯ ರಾಮಸಾಗರ ಮತ್ತು ಕಂಪ್ಲಿ ಅಣೆಕಟ್ಟುಗಳನ್ನು ವೀಕ್ಷಣೆ ಮಾಡಲಾಯಿತು. ನಂತರ ಬೆಳಗೋಡಹಾಳ್ ನೀರು ಬಳಕೆದಾರರ ಸಹಕಾರ ಸಂಘದ ಪದಾಧಿಕಾರಿಗಳೊಂದಿಗೆ ಸಂಘದ ದಾಖಲಾತಿಗಳ ನಿರ್ವಹಣೆ, ಕ್ಯಾಡ್ ಪ್ಯಾಕೇಜ್



ಪ್ರಗತಿ ಪರಿಶೀಲನಾ ಸಭೆ

ಕಂಪ್ಲಿ ಅಣೆಕಟ್ಟು



ಕಾಮಗಾರಿಗಳ ಸಿದ್ಧತೆ, ಮಹಿಳಾ ಭಾಗವಹಿಸುವಿಕೆ, ಇತರೆ ಇಲಾಖೆಗಳೊಂದಿಗೆ ಸಂಪರ್ಕ, ಕೃಷಿ ಚಟುವಟಿಕೆಗಳು ಮುಂತಾದ ಅಂಶಗಳ ಕುರಿತು ಮಾಹಿತಿ ಪಡೆಯಲಾಯಿತು. ಕೃಷಿಕ ಶ್ರೀ ಹರೀಶ್ ಸಿಂಗ್ ಜಮೀನಿಗೆ ಭೇಟಿ ನೀಡಿ ಅವರು ತಯಾರಿಸಿರುವ ವೇಸ್ಟ್ ಡಿಕಂಪೋಸರ್ ಮತ್ತು ಮೀನಿನ ಕಷಾಯದ ಬಳಕೆ ಮತ್ತು ಉಪಯೋಗದ ಮಾಹಿತಿ ಪಡೆಯಲಾಯಿತು. ಈ ಸಮಯದಲ್ಲಿ ಪಿ.ಎಸ್.ಸಿ. ಕಂಪ್ಲಿ ಕಛೇರಿಯ ಸಿಬ್ಬಂದಿಗಳು ಮತ್ತು ಕೃಷಿ ತಜ್ಞರು ಹಾಜರಿದ್ದು ಮಾಹಿತಿ ನೀಡಿದರು.

ಈ ಚರ್ಚೆಯ ನಂತರ ಪ್ಯಾಕೇಜ್ 1ರ ಅಡಿಯಲ್ಲಿ ಕಂಪ್ಲಿ ಮುಖ್ಯ ಕಾಲುವೆಯಲ್ಲಿ ನಡೆಯುತ್ತಿರುವ ಆಧುನೀಕರಣ ಕಾಮಗಾರಿಗಳನ್ನು ವೀಕ್ಷಿಸಲಾಯಿತು. ನಿಕೇತನ್ ಕನ್ಸಲ್ಟೆನ್ಸಿ (ಗುಣಮಟ್ಟ ಪರಿಶೀಲನೆ ಏಜನ್ಸಿ) ಸಿಬ್ಬಂದಿಗಳು ಸಿಮೆಂಟ್ ಕಾಂಕ್ರೀಟಿನ ಕೋರ್ ಪರೀಕ್ಷೆ ವಿಧಾನವನ್ನು ಪ್ರಾತ್ಯಕ್ಷಿಕೆ ಮಾಡಿ ತೋರಿಸಿದರು. ಬಳಿಕ ಪ್ಯಾಕೇಜ್ 2ರಲ್ಲಿ ಕೈಗೊಳ್ಳುತ್ತಿರುವ ಬಲದಂಡೆಯ ತುರ್ತಾ ಕಾಲುವೆ ಮತ್ತು ಅಣೆಕಟ್ಟೆಯನ್ನು ಪರಿಶೀಲಿಸಲಾಯಿತು.

ದಿನಾಂಕ 19.4.2023 ರಂದು ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್ ಇವರ ಕಛೇರಿಯಲ್ಲಿ ಎರಡು ಪ್ರತ್ಯೇಕ ಗುಂಪುಗಳಲ್ಲಿ ಪ್ರಗತಿ ಪರಿಶೀಲನೆ ಮುಂದುವರಿಯಿತು. ಒಂದು ಗುಂಪು ಪ್ಯಾಕೇಜ್ 1 ಮತ್ತು 2ರ ಸಿವಿಲ್ ಕಾಮಗಾರಿಗಳ ಬಗ್ಗೆ ಹಾಗೂ ಮತ್ತೊಂದು ಗುಂಪು ಪರಿಸರ ಮತ್ತು ಸಾಮಾಜಿಕ ಸುರಕ್ಷಾ ಕ್ರಮಗಳ ಬಗ್ಗೆ ಚರ್ಚೆ ನಡೆಸಿದವು. ಪ್ಯಾಕೇಜ್ 1ರ ಎಡ ಮತ್ತು ಬಲದಂಡೆಯಲ್ಲಿ ಕಾಲುವೆವಾರು ಆಗಬೇಕಾಗಿರುವ ಕಾಮಗಾರಿಗಳು, ಕಾಲಮಿತಿ, ಹಣಕಾಸು ಪ್ರಗತಿಗೆ ವೇಗ ನೀಡುವುದು, ಹಾಗೆಯೇ ಪ್ಯಾಕೇಜ್ 2ರ 8 ಅಣೆಕಟ್ಟುಗಳು ಮತ್ತು ತುರ್ತಾ ಕಾಲುವೆಗೆ ಸಂಬಂಧಿಸಿದಂತೆ ಕಾಮಗಾರಿ ಅನುಷ್ಠಾನಕ್ಕೆ ನಿರ್ಧಿಷ್ಟ ಕಾರ್ಯಕ್ರಮ ರೂಪಿಸಿಕೊಳ್ಳುವುದು, ವಿವಿಧ ಸಹಭಾಗಿ ಸಂಸ್ಥೆಗಳ ಸಹಯೋಗದೊಂದಿಗೆ ಕಾಮಗಾರಿ ಅನುಷ್ಠಾನದ ಬಗ್ಗೆ ಚರ್ಚಿಸಲಾಯಿತು.

ಮೂರು ದಿನಗಳ ಸಭೆ ಮತ್ತು ಕ್ಷೇತ್ರ ಭೇಟಿಯಲ್ಲಿ ಮುಖ್ಯ ಇಂಜಿನಿಯರ್, ಅಧೀಕ್ಷಕ ಇಂಜಿನಿಯರ್ ಹಾಗೂ ಕರ್ನಾಟಕ ನೀರಾವರಿ ನಿಗಮದ ವಿವಿಧ ವಿಭಾಗಗಳ ಕಾರ್ಯಪಾಲಕ ಇಂಜಿನಿಯರುಗಳು, ಸಹಾಯಕ ಕಾರ್ಯಪಾಲಕ ಇಂಜಿನಿಯರುಗಳು, ಸಹಾಯಕ ಇಂಜಿನಿಯರುಗಳು ಮತ್ತು ಇಜಿಐಎಸ್ ಯೋಜನಾ ಸಹಾಯಕ ಸಮಾಲೋಚಕ ತಂಡದ ಟೀಮ್ ಲೀಡರ್, ಪ್ರಾಜೆಕ್ಟ್ ಮ್ಯಾನೇಜರ್ ಹಾಗೂ ಇನ್ನಿತರ ತಜ್ಞರುಗಳು ಹಾಗೂ ಗುತ್ತಿಗೆದಾರರು ಭಾಗವಹಿಸಿದ್ದರು. ❖



ಕೃಷಿ ಪ್ರಾತ್ಯಕ್ಷಿಕೆ ವೀಕ್ಷಣೆ




ಬೆಳಗೋಡಹಾಳ್ ಸಂಘದೊಂದಿಗೆ ಎಡಿಬಿ ಚರ್ಚೆ

# ಪಾರಂಪರಿಕ ಮೌಲ್ಯಮಾಪನ ಹಾಗೂ ನಿರ್ವಹಣಾ ಯೋಜನೆ ಸಭೆ

ಮಾರ್ಚ್ 2023ರಲ್ಲಿ ಪ್ಯಾಕೇಜ್ 2ರ ಅಡಿಯಲ್ಲಿ ಬರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಗುತ್ತಿಗೆದಾರರನ್ನು ನಿಯಮಾನುಸಾರ ಆಯ್ಕೆ ಮಾಡಿಕೊಳ್ಳಲಾಯಿತು. ಈ ಕಾಮಗಾರಿಗಳು ಹಂಪಿ ವಿಶ್ವ ಪರಂಪರೆ ಪರಿಸರ, ನೀರು ನಾಯಿಗಳ ಸಂರಕ್ಷಣಾ ಪ್ರದೇಶ ಹಾಗೂ ದರೋಜಿ ಕರಡಿ ಧಾಮ ವ್ಯಾಪ್ತಿಯಲ್ಲಿ ಬರುವುದರಿಂದ ಈ ಬಗ್ಗೆ ಚರ್ಚಿಸಲು ದಿನಾಂಕ 7.3.2023ರಂದು ಮುಖ್ಯ ಇಂಜಿನಿಯರ್ ಅವರ ಕಛೇರಿಯಲ್ಲಿ ಸಭೆ ಕರೆಯಲಾಗಿತ್ತು. ಮುಖ್ಯ ಇಂಜಿನಿಯರ್ ಅವರು ಎಲ್ಲರನ್ನೂ ಸಭೆಗೆ ಸ್ವಾಗತಿಸಿ, ಪ್ಯಾಕೇಜ್ 2ರ ಮೂಲಕ ಅನುಷ್ಠಾನವಾಗುತ್ತಿರುವ ತುರ್ತಾ ಅಣೆಕಟ್ಟು ಮತ್ತು ತುರ್ತಾ ಕಾಲುವೆಯು ವಿಶ್ವ ಪರಂಪರೆ ಪ್ರದೇಶ ವ್ಯಾಪ್ತಿಯಲ್ಲಿ ಬರುತ್ತಿದ್ದು ಕಾಮಗಾರಿ ಕೈಗೊಳ್ಳುವಾಗ ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕಾಗಿದೆ. ಆ ಬಗ್ಗೆ ಚರ್ಚಿಸಲು ಇಂದಿನ ಸಭೆ ಕರೆದಿರುವುದಾಗಿ ತಿಳಿಸಿದರು.

ಯೋಜನಾ ಸಹಾಯಕ ಸಮಾಲೋಚಕ ತಂಡದ ಕಲ್ಚರಲ್ ಹೆರಿಟೇಜ್ ತಜ್ಞರಾದ ಡಾ. ಪೂನಮ್ ವರ್ಮ ಅವರು 'ಪಾರಂಪರಿಕ ಮೌಲ್ಯಮಾಪನ ಹಾಗೂ ನಿರ್ವಹಣಾ ಯೋಜನೆ'ಯನ್ನು ಮಂಡಿಸಿದರು. ಭಾರತೀಯ ಪುರಾತತ್ವ ಇಲಾಖೆ, ಹಂಪಿ ವಲಯ, ಹೊಸಪೇಟೆ ಕಛೇರಿಯಿಂದ ಸಭೆಯಲ್ಲಿ ಭಾಗವಹಿಸಿದ್ದ ಶ್ರೀ ವಿನೋಜ್ ಕುಮಾರ್ ಎಂ.ಟಿ. ಹಾಗೂ ಶ್ರೀ ರವಿಕುಮಾರ್ ಜೆ. ಅವರು ತುರ್ತಾ ಅಣೆಕಟ್ಟು ಮತ್ತು ಕಾಲುವೆಯಲ್ಲಿ ಕಾಮಗಾರಿ ನಿರ್ವಹಿಸುವಾಗ ಮೂಲ ಪಾರಂಪರಿಕ ರಚನೆಗಳು, ಕಟ್ಟಡಗಳಿಗೆ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳಬೇಕು, ಮೂಲ ರಚನೆಯು ಉತ್ತಮವಾಗಿರುವ ಭಾಗದಲ್ಲಿ ಅದನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಬೇಕು, ಹೊಸದಾಗಿ ನಿರ್ಮಾಣ ಮಾಡುವಾಗ ಮೂಲ ರಚನೆಯನ್ನೇ ಹೋಲುವ ಸಾಮಗ್ರಿಗಳನ್ನು ಬಳಸಬೇಕು ಮುಂತಾದ ಅಂಶಗಳನ್ನು ವಿವರಿಸಿದರು.

ಹಂಪಿ ವಿಶ್ವ ಪರಂಪರೆ ಸಂರಕ್ಷಣೆ ಪ್ರಾಧಿಕಾರದಿಂದ ಭಾಗವಹಿಸಿದ್ದ ಶ್ರೀ ಮಜಹರ್ ಶರೀಫ್, ಉಪ ನಿರ್ದೇಶಕರು, ಹಾಗೂ ಶ್ರೀ ಸ್ಯಾಮ್ಯುಯಲ್, ಟೌನ್ ಪ್ಲಾನರ್, ಇವರು ಕಾಮಗಾರಿ ಅನುಷ್ಠಾನಕ್ಕೆ ಮುನ್ನ ತುರ್ತಾ ಅಣೆಕಟ್ಟು ಮತ್ತು ಕಾಲುವೆಯನ್ನು ವೀಡಿಯೋ ದಾಖಲಾತಿ ಮಾಡಬೇಕು, ಕಾಮಗಾರಿ ಅನುಷ್ಠಾನ ಮಾಡುವ ಸಮಯದಲ್ಲಿ ತಿಳಿಸಿದರೆ ನಮ್ಮ ಕಛೇರಿಯಿಂದ ಇಂಜಿನಿಯರ್ ಅವರನ್ನು ಕಾಮಗಾರಿ ಉಸ್ತುವಾರಿಗೆ ಕಳುಹಿಸಲಾಗುವುದು ಹಾಗೂ ಕಾಮಗಾರಿಗೆ ಅನುಮತಿ ನೀಡಲಾದ ಪತ್ರದಲ್ಲಿ ಸೂಚಿಸಿರುವ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು ಎಂದರು.

ಇಜಿಐಎಸ್ ಟೀಮ್ ಲೀಡರ್ ಶ್ರೀ ಆರ್. ದೊರೈಸ್ವಾಮಿ ಅವರು 'ಪಾರಂಪರಿಕ ಮೌಲ್ಯಮಾಪನ ಹಾಗೂ ನಿರ್ವಹಣಾ ಯೋಜನೆ' (ಹೆರಿಟೇಜ್ ಅಸೆಸ್ಮೆಂಟ್ ಹಾಗೂ ಮ್ಯಾನೇಜ್ಮೆಂಟ್ ಪ್ಲಾನ್)ಯ ಕರಡು ಪ್ರತಿಯನ್ನು ಹಂಚಿಕೊಂಡರು. ವಿ.ಎನ್.ಸಿ ಯೋಜನಾ ಸಂಯೋಜಕರಾದ ಶ್ರೀ ಎಸ್.ಬಿ. ನಾಗಭೂಷಣ್ ಅವರು ಪ್ರಾಧಿಕಾರದಿಂದ ಕಾಮಗಾರಿ ನಿರ್ವಹಣೆಗೆ ಅನುಮತಿ ನೀಡಿರುವ ಪತ್ರದಲ್ಲಿ ಸೂಚಿಸಿರುವ ಅಂಶಗಳನ್ನು ವಿವರಿಸಿದರು. ಕಾರ್ಯಪಾಲಕ ಇಂಜಿನಿಯರ್ ಶ್ರೀ ಕೆ.ಬಿ.ಹೆಚ್. ಶಿವಶಂಕರ್ ಅವರು ಯಾವುದೇ ಸಮಸ್ಯೆ ಇಲ್ಲದಂತೆ ಈ ಕಾಮಗಾರಿಗಳನ್ನು ಕೈಗೊಳ್ಳಲು ಎಲ್ಲರೂ ಕೈಜೋಡಿಸಬೇಕು ಎಂದು ತಿಳಿಸಿದರು. ಪ್ಯಾಕೇಜ್ 2ರ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಆಯ್ಕೆಯಾಗಿರುವ ಶ್ರೀಜಿ ಇನ್ಫ್ರಾಸ್ಟ್ರೇಸ್ ಗುತ್ತಿಗೆದಾರ ಕಂಪನಿಯ ಇಬ್ಬರು ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು. ❖





ಮುಖ್ಯ ಇಂಜಿನಿಯರ್ ಅವರ ನೇತೃತ್ವದಲ್ಲಿ ಸಭೆ

# ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾಮಗಾರಿ ಪ್ಯಾಕೇಜುಗಳಿಗೆ ಸಹಿ

ವಿ.ಎನ್.ಸಿ ಯೋಜನೆಯಲ್ಲಿ ಮೊದಲ ಬಾರಿಗೆ ಕ್ಯಾಡ್ ಪ್ಯಾಕೇಜ್ ಕಾಮಗಾರಿಗಳ ಒಪ್ಪಂದ ಪತ್ರಗಳಿಗೆ ಸಹಿ ಹಾಕುವ ಮೂಲಕ ಶುಭಾರಂಭ ಮಾಡಲಾಯಿತು. ಮುಖ್ಯ ಇಂಜಿನಿಯರ್ ಅವರ ಕಛೇರಿ ಸಭಾಂಗಣದಲ್ಲಿ ದಿನಾಂಕ 15-03-2023 ರಂದು ಕಾಡಾ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ಶಿವಶಂಕರ್, ಕಾರ್ಯಪಾಲಕ ಇಂಜಿನಿಯರ್, ತುಂಗಭದ್ರಾ ಜಲಾಶಯ ವಿಭಾಗ 1, ಶ್ರೀಮತಿ ಮಂಜುಳಾ ಕುಮಾರಿ, ಕಾರ್ಯಪಾಲಕ ಇಂಜಿನಿಯರ್(ವಿನ್ಯಾಸ), ನೀರಾವರಿ ಕೇಂದ್ರ ವಲಯ, ಮುನಿರಾಬಾದ್, ನೀರು ಬಳಕೆದಾರರ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಹಿ ಹಾಕುವ ಮೂಲಕ ಇದು ನೆರವೇರಿತು.

ಸಾಂಕೇತಿಕವಾಗಿ ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲ್ಲೂಕಿನ ರಾಮಸಾಗರ, ನಂ.88 ಮುದ್ಲಾಪುರ ಮತ್ತು ವಿಜಯನಗರ ಜಿಲ್ಲೆ, ಹೊಸಪೇಟೆ ತಾಲ್ಲೂಕಿನ ಮಲಪನಗುಡಿ ನೀರು ಬಳಕೆದಾರರ ಸಹಕಾರ ಸಂಘಗಳ ಕಾಮಗಾರಿ ಒಪ್ಪಂದ ಪತ್ರಗಳಿಗೆ ಸಹಿ ಮಾಡಿದ ದಾಖಲಾತಿಗಳನ್ನು ಕಾಡಾ ತುಂಗಭದ್ರಾ ಯೋಜನೆ, ಮುನಿರಾಬಾದ್ ನ ಆಡಳಿತಾಧಿಕಾರಿಗಳಾದ ಶ್ರೀ ಸೈಯದ್ ಐಸಾಕ್ ಅಪ್ಸರ್ ಅವರು ಹಸ್ತಾಂತರ ಮಾಡಿದರು. ಇಜಿಐಎಸ್ ಯೋಜನಾ ಸಹಾಯಕ ಸಮಾಲೋಚಕ ತಂಡದ ಟೀಮ್ ಲೀಡರ್ ಶ್ರೀ ಆರ್. ದೊರೈಸ್ವಾಮಿ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಯೋಜನಾ ವ್ಯಾಪ್ತಿಯಲ್ಲಿ ರಚನೆಯಾಗಿರುವ ಸಂಘಗಳು, ಕೈಗೊಳ್ಳುತ್ತಿರುವ ತರಬೇತಿಗಳು, ಸುಸ್ಥಿರ ಕೃಷಿ ಚಟುವಟಿಕೆಗಳು, ಕಾಡಾ ಕಾಮಗಾರಿಗಳನ್ನು ಕೈಗೊಳ್ಳಲು ನಡೆಸಿರುವ ಸರ್ವೇ, ನಕ್ಷೆಗಳು ಇತ್ಯಾದಿ ಚಟುವಟಿಕೆಗಳ ಬಗ್ಗೆ ವಿವರಿಸಿದರು.

ಈ ಸಭೆಯಲ್ಲಿ ಅಧೀಕ್ಷಕ ಇಂಜಿನಿಯರ್ ಶ್ರೀ ಎಲ್. ಬಸವರಾಜು, ವಡ್ಡೇರಹಟ್ಟಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಶ್ರೀ ಎಂ.ಎಸ್. ಗೋಡೇಕರ್, ವಿ.ಎನ್.ಸಿ ಯೋಜನಾ ಸಂಯೋಜಕರಾದ ಶ್ರೀ ಎಸ್.ಬಿ. ನಾಗಭೂಷಣ್, ಕಾಡಾ ತುಂಗಭದ್ರಾ ಯೋಜನೆಯ ಕಾರ್ಯಪಾಲಕ ಇಂಜಿನಿಯರ್ ಶ್ರೀಮತಿ ವೀಣಾ, ಕಾಡಾ ಕಛೇರಿಯ ಭೂ ಅಭಿವೃದ್ಧಿ ಅಧಿಕಾರಿಗಳು, ಇಜಿಐಎಸ್ ಯೋಜನಾ ಸಹಾಯಕ ಸಮಾಲೋಚಕ ತಂಡದ ಯೋಜನಾ ವ್ಯವಸ್ಥಾಪಕರಾದ ಡಾ. ವಿನಯ್ ಕುಮಾರ್ ರಾಟಿ ಹಾಗೂ ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಇದಾದ ನಂತರ ಇಜಿಐಎಸ್ ಕಾಮಗಾರಿ ನಿರ್ವಹಣಾ ತಜ್ಞರಾದ ಶ್ರೀ ರಮೇಶ್ ಅವರು ವಿವಿಧ ಕಾಡಾ ಕಾಮಗಾರಿಗಳು, ಅವುಗಳನ್ನು ಕೈಗೊಳ್ಳುವಾಗ ಅಳವಡಿಸಿಕೊಳ್ಳಬೇಕಾದ ಕ್ರಮಗಳು, ವಹಿಸಬೇಕಾದ ಎಚ್ಚರಿಕೆಗಳು, ಗುಣಮಟ್ಟ ಕಾಯ್ದುಕೊಳ್ಳುವಿಕೆ, ಕಚ್ಚಾವಸ್ತುಗಳ ಸಂಗ್ರಹ ಇತ್ಯಾದಿಗಳ ಬಗ್ಗೆ ಪಿಪಿಟಿ ಪ್ರದರ್ಶನದ ಮೂಲಕ ವಿವರಿಸಿದರು. ಕಾಮಗಾರಿ ನಿರ್ವಹಣಾ ಇಂಜಿನಿಯರ್ ಶ್ರೀ ದೀಪಕ್ ಕುಮಾರ್ ಅವರು ಸಾಮಾಜಿಕ ಮತ್ತು ಪರಿಸರ ಸುರಕ್ಷಾ ಕ್ರಮಗಳ ಮಹತ್ವ ಹಾಗೂ ಇದುವರೆಗೆ ಗುತ್ತಿಗೆದಾರರು ಅಳವಡಿಸಿಕೊಂಡಿರುವ ಕ್ರಮಗಳ ಬಗ್ಗೆ ಪಿಪಿಟಿ ಪ್ರದರ್ಶನದ ಮೂಲಕ ತಿಳಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ನೀರಾವರಿ ನಿಗಮ, ಕಾಡಾ ತುಂಗಭದ್ರಾ ಯೋಜನೆಯ ಇಂಜಿನಿಯರುಗಳು, ಸಿಬ್ಬಂದಿಗಳು, ಇಜಿಐಎಸ್ ತಂಡದ ವಿವಿಧ ತಜ್ಞರು ಹಾಗೂ ನೀ.ಬ.ಸ.ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿ ಒಟ್ಟು 59 ಜನರು ಭಾಗವಹಿಸಿದ್ದರು. ❖





ಕಾಡಾ ಆಡಳಿತಾಧಿಕಾರಿ ಅವರಿಂದ ಒಡಂಬಡಿಕೆ ಹಸ್ತಾಂತರ ಮತ್ತು ಮಾತುಗಳು

# ಕಾಡಾ ಕಾಮಗಾರಿಗಳ ಅನುಷ್ಠಾನದ ಕುರಿತು ಸರಣಿ ತರಬೇತಿಗಳು

ಮಾರ್ಚ್ ಹಾಗೂ ಎಪ್ರಿಲ್ ತಿಂಗಳ ಅವಧಿಯಲ್ಲಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ವಿವಿಧ ಪಾಲುದಾರರಿಗೆ ಹಾಗೂ ನೀರು ಬಳಕೆದಾರರ ಸಹಕಾರ ಸಂಘಗಳ ಸದಸ್ಯರುಗಳಿಗೆ ಮತ್ತು ರೈತರಿಗೆ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಗಳಲ್ಲಿ ಕಾಡಾ ಕಾಮಗಾರಿಗಳ ಅನುಷ್ಠಾನದ ಕುರಿತು ವಿಶೇಷ ಒತ್ತು ನೀಡಲಾಯಿತು.

### ಕಾಡಾ ಕಾಮಗಾರಿ ತರಬೇತಿಯ ಉದ್ದೇಶಗಳು:

- ಸಂಘಕ್ಕೆ ದೊರೆಯುವ ಹಣಕಾಸಿನ ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸಂಘಗಳು ಸುಸ್ಥಿರವಾಗಿ ಮತ್ತು ಸ್ವಾವಲಂಬನೆಯಿಂದ ಮುಂದುವರೆಯುವಂತೆ ಮಾಡುವುದು.
- ಹೊಲಗಾಲುವೆ ಕಾಮಗಾರಿ ಗುಣಮಟ್ಟ ಕಾಪಾಡುವ ವಿಧಾನಗಳ ಬಗ್ಗೆ ತಿಳಿಯುವುದು.
- ಕಾಮಗಾರಿಗಳು ನಡೆಯುವಾಗ ಗುಣಮಟ್ಟ ಕಾಪಾಡಿಕೊಳ್ಳಬಹುದಾದ ವಿಧಾನಗಳ ಬಗ್ಗೆ ಅರಿಯುವುದು.
- ಕಾಮಗಾರಿಗೆ ಬೇಕಾದ ಸಾಮಗ್ರಿಗಳನ್ನು ಪಟ್ಟಿ ಮಾಡುವುದು, ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಖರೀದಿಸುವ ಬಗ್ಗೆ ತಿಳಿದುಕೊಳ್ಳುವುದು.

### ತರಬೇತಿಗಳು ನಡೆದ ವಿವರ:

| ದಿನಾಂಕ | ಸ್ಥಳ | ಭಾಗವಹಿಸಿದವರ ಸಂಖ್ಯೆ |
|---|---|---|
| 14.3.2023 | ಕಾರ್ಯಪಾಲಕ ಅಭಿಯಂತರರ ಕಛೇರಿ, ಮುನಿರಾಬಾದ್ | 30 |
| 11.4.2023 | ಕಾರ್ಯಪಾಲಕ ಅಭಿಯಂತರರ ಕಛೇರಿ, ವಡ್ಡರಹಟ್ಟಿ ಕ್ಯಾಂಪ್ | 26 |
| 12.4.2023 | ಕಾರ್ಯಪಾಲಕ ಅಭಿಯಂತರರ ಕಛೇರಿ, ಮುನಿರಾಬಾದ್ | 18 |

ಈ ತರಬೇತಿಗಳಲ್ಲಿ ಸಂಘದ ವತಿಯಿಂದ ಕೈಗೊಳ್ಳಬಹುದಾದ ಕಾಮಗಾರಿಗಳು, ಕಾಮಗಾರಿಗಳನ್ನು ಕೈಗೊಳ್ಳುವಾಗ ಗಮನಿಸಬೇಕಾದ ಅಂಶಗಳಾವುವು ಎಂಬುದನ್ನು ತಿಳಿಸಲಾಯಿತು. ಸಂಘಗಳು ಹೊಲಗಾಲುವೆಗಳಿಗೆ ಕಾಂಕ್ರೀಟ್ ಲೈನಿಂಗ್ ನಿರ್ಮಾಣದ ಆದೇಶ ಪ್ರತಿಯನ್ನು ಪಡೆದುಕೊಂಡು, ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಿ ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಇದಕ್ಕೆ ಎಲ್ಲಾ ನೀರು ಬಳಕೆದಾರರ ಸಹಕಾರ ಸಂಘಗಳ ಅಧ್ಯಕ್ಷರು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.

ಈ ತರಬೇತಿಯಲ್ಲಿ ಶ್ರೀ ಎಂ.ಎಸ್. ಗೋಡೇಕರ್, ಕಾರ್ಯಪಾಲಕ ಇಂಜಿನಿಯರ್, ವಡ್ಡೇರಹಟ್ಟಿ ವಲಯ, ಶ್ರೀ ವಿಶ್ವನಾಥ್, ಶ್ರೀ ಅಮರೇಶ್ವರಪ್ಪ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರುಗಳಾದ ಶ್ರೀ ಅಂಬರೀಶ್, ಶ್ರೀ ಪ್ರವೀಣ್ ಭಾಗವಹಿಸಿದ್ದರು.



ಬೆಳಗೋಡಹಾಳ್ ಸಂಘದವರಿಂದ ನಿಗಮಕ್ಕೆ ನೀರಿನ ದರ ಪಾವತಿ

ಅದೇ ರೀತಿ ದಿನಾಂಕ 14.3.2023ರಂದು ಕಾರ್ಯಪಾಲಕ ಅಭಿಯಂತರರ ಕಛೇರಿ, ಮುನಿರಾಬಾದ್ ನಲ್ಲಿ ಬಲದಂಡೆಯ ಸಂಘಗಳ ಪದಾಧಿಕಾರಿಗಳಿಗೆ ಕಾಡಾ ಕಾಮಗಾರಿ ಅನುಷ್ಠಾನದಲ್ಲಿ ಸಂಘಗಳ ಜವಾಬ್ದಾರಿ, ಪಾವತಿ ವಿಧಾನ, ಗುಣನಿಯಂತ್ರಣ ಇತ್ಯಾದಿ ವಿಷಯಗಳ ಬಗ್ಗೆ ಕಾರ್ಯಪಾಲಕ ಇಂಜಿನಿಯರ್ ಶ್ರೀ ಕೆ.ಬಿ.ಹೆಚ್. ಶಿವಶಂಕರ್, ಯೋಜನಾ ಸಂಯೋಜಕರಾದ ಶ್ರೀ ಎಸ್.ಬಿ. ನಾಗಭೂಷಣ್, ಇಜಿಐಎಸ್ ತಂಡದ ಟೀಮ್ ಲೀಡರ್

ಶ್ರೀ ಆರ್. ದೊರೈಸ್ವಾಮಿ ಅವರು ವಿವರಿಸಿದರು. ಈ ತರಬೇತಿಯಲ್ಲಿ ಬೆಳಗೋಡಹಾಳ್ ಸಂಘದವರು ನೀರಿನ ದರವನ್ನು ನಿಗಮಕ್ಕೆ ಡಿಡಿ ಮೂಲಕ ಸಲ್ಲಿಸಿದರು.

ದಿನಾಂಕ 12.4.2023 ರಂದು ಕಾರ್ಯಪಾಲಕ ಇಂಜಿನಿಯರ್ ಅವರ ಕಛೇರಿ, ನಂ.1, ತುಂಗಭದ್ರಾ ವಿಭಾಗ, ಮುನಿರಾಬಾದ್‌ನಲ್ಲಿ ನಡೆದ ತರಬೇತಿಯಲ್ಲಿ ಬಲದಂಡೆ ವ್ಯಾಪ್ತಿಯ 11 ಸಂಘಗಳ ಅಧ್ಯಕ್ಷರು ಮತ್ತು ಸಿ.ಇ.ಓ.ಗಳು ಭಾಗವಹಿಸಿದ್ದು, ಕಾಡಾ ಕಾಮಗಾರಿ ಒಪ್ಪಂದ ಪತ್ರಗಳಿಗೆ ಸಹಿ ಹಾಕಿದರು. ಕಾರ್ಯಪಾಲಕ ಇಂಜಿನಿಯರ್ ಶ್ರೀ ಕೆ.ಬಿ.ಹೆಚ್. ಶಿವಶಂಕರ್ ಅವರು ಸಂಘಗಳ ಪದಾಧಿಕಾರಿಗಳಿಗೆ ಕಾಡಾ ಕಾಮಗಾರಿಗಳ ಮಹತ್ವದ ಬಗ್ಗೆ ವಿವರಿಸಿದರು. ❖

## ವಿಭಿನ್ನವಾಗಿ ನಡೆದ ಮಹಿಳಾ ದಿನಾಚರಣೆ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಲ್ಲಿ 'ನೀರೆಯರಿಂದ ನೀರಿನ ಜಾಗೃತಿ' ಕಾರ್ಯಕ್ರಮವನ್ನು ಮೂರು ಸಂಘಗಳ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಯೋಜನೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ, ಇರುವ ಅವಕಾಶಗಳು, ಕೃಷಿ ಮತ್ತು ಕಾಲುವೆ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರಗಳ ಬಗ್ಗೆ ಈ ಸಂದರ್ಭದಲ್ಲಿ ತಿಳಿಸಿಕೊಡಲಾಯಿತು. ಅಲ್ಲದೆ ಮಹಿಳಾ ದಿನಾಚರಣೆ ಆರಂಭವಾದ ಹಿನ್ನೆಲೆಯನ್ನು ವಿವರಿಸಿದ್ದು ವಿಶೇಷ. ಇಜಿಐಎಸ್ ಯೋಜನಾ ಸಹಾಯಕ ತಂಡದ ಸಿಬ್ಬಂದಿಗಳು ಆಯಾ ಕಾಲುವೆಗಳ ವಿವರ, ವ್ಯಾಪ್ತಿಗೆ ಬರುವ ನೀರು ಬಳಕೆದಾರರ ಸಹಕಾರ ಸಂಘಗಳು, ನೀರಿನ ದರ ಸಂಗ್ರಹಿಸುವ ಅಗತ್ಯ ಇತ್ಯಾದಿ ಮಾಹಿತಿಯನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ, ಮಹಿಳಾ ದಿನಾಚರಣೆ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಹೆಣ್ಣುಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಯೋಜನಾ ವ್ಯಾಪ್ತಿಯಲ್ಲಿನ ಎಡದಂಡೆಯ ಹುಲಿಗಿ, ಬಲದಂಡೆಯ ರಾಮಸಾಗರ ಮತ್ತು ನರಸಾಪುರ ಸಂಘಗಳ ವ್ಯಾಪ್ತಿಯಲ್ಲಿ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಮೂರೂ ಗ್ರಾಮಗಳಲ್ಲಿ ಹೆಣ್ಣುಮಕ್ಕಳು ಮುಖ್ಯ ಕಾಲುವೆಯ ಬಳಿ ತೆರಳಿ ಗಂಗಾಪೂಜೆ ನೆರವೇರಿಸಿದರು. ಈ ಸಮಯದಲ್ಲಿ ವಿಜಯನಗರ ಕಾಲುವೆಗಳ ಪ್ರಾಚೀನತೆ, ಅಚ್ಚುಕಟ್ಟು ಪ್ರದೇಶ, ಮಾಲಿನ್ಯತೆ ತಡೆಗಟ್ಟುವ ಅವಶ್ಯಕತೆ ಇತ್ಯಾದಿಗಳ ಬಗ್ಗೆ ತಿಳಿಸಲಾಯಿತು. ಎಲ್ಲರೂ ಒಗ್ಗಟ್ಟಿನಿಂದ ಕಾಲುವೆ ನಿರ್ವಹಣೆ ಮಾಡುವುದಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ನಂತರ ಕಳಸ ಮತ್ತು ಕುಂಭಗಳನ್ನು ಹೊತ್ತು ಗ್ರಾಮದ ಬೀದಿಗಳಲ್ಲಿ ಕಾಲ್ನಡಿಗೆ ಮೂಲಕ ನೀರು ನಿರ್ವಹಣೆ ಮಹತ್ವದ ಬಗ್ಗೆ ಘೋಷಣೆ ಹೇಳುತ್ತಾ ಸಾಗಿದರು. ಶಾಲಾ ಮಕ್ಕಳು ಇದರಲ್ಲಿ ಭಾಗವಹಿಸಿದ್ದು ವಿಶೇಷ.

ವಿವಿಧ ಇಲಾಖೆಗಳ ಅಧಿಕಾರಿಗಳು, ನಿಗಮದ ಇಂಜಿನಿಯರುಗಳು, ಇಜಿಐಎಸ್ ತಜ್ಞರು, ಗ್ರಾಮ ಪಂಚಾಯ್ತಿ ಸದಸ್ಯರುಗಳು ಹಾಗೂ ಮಹಿಳಾ ಉಪಸಮಿತಿಯ ಮಹಿಳೆಯರು ಮತ್ತು ಮಕ್ಕಳು ಉಪಸ್ಥಿತರಿದ್ದರು.



ರಾಮಸಾಗರ ಮಹಿಳಾ ದಿನಾಚರಣೆ

### ಭಾಗವಹಿಸಿದವರ ವಿವರ

| | ಕಾಲುವೆ | ಕಾರ್ಯಕ್ರಮ ನಡೆದ ಸ್ಥಳ | ಭಾಗವಹಿಸಿದ ಸಂಘಗಳು | ದಿನಾಂಕ | ಭಾಗವಹಿಸಿದವರ ವಿವರ | | | |
|---|---|---|---|---|---|---|---|---|
| | | | | | ಮಹಿಳೆ | ಪುರುಷ | ಮಕ್ಕಳು | ಒಟ್ಟು |
| 1 | ರಾಮಸಾಗರ | ರಾಮಸಾಗರ | ರಾಮಸಾಗರ, 10ಮುದ್ದಾಪುರ | 6.3.2023 | 50 | 20 | 00 | 70 |
| 2 | ಹುಲಿಗಿ | ಹುಲಿಗಿ | ಹುಲಿಗಿ, ಶಿವಪುರ | 10.3.2023 | 40 | 10 | 00 | 50 |
| 3 | ಕಾಳಘಟ್ಟ | ನರಸಾಪುರ | ನರಸಾಪುರ, ಹೊಸೂರು | 14.3.2023 | 54 | 8 | 8 | 70 |
| ಒಟ್ಟು | 3 | 3 | 6 | | 144 | 38 | 08 | 190 |




ಹುಲಿಗಿ ಮಹಿಳಾ ದಿನಾಚರಣೆ



ನರಸಾಪುರ ಮಹಿಳಾ ದಿನಾಚರಣೆ

## ವೇಸ್ಟ್ ಡಿಕಂಪೋಸರ್; ಬಹು ಉಪಯೋಗಿ ಹಾಗೂ ಕಡಿಮೆ ವೆಚ್ಚ

ಬೆಲ್ಲಾ ಕಾಲುವೆ ವ್ಯಾಪ್ತಿಯ ಹೊಸೂರು ಗ್ರಾಮದ ರೈತರಾದ ಭರತ್ ಕುಮಾರ್ ವೇಸ್ಟ್ ಡಿಕಂಪೋಸರ್ ಅಳವಡಿಕೆ ಮಾಡುವಲ್ಲಿ ತುಂಬಾ ಉತ್ಸುಕರಾಗಿದ್ದರು. ವಿ.ಎನ್.ಸಿ ಯೋಜನಾ ವತಿಯಿಂದ ಇವರಿಗೆ ಈ ಕುರಿತು ಮಾರ್ಚ್ ತಿಂಗಳಲ್ಲಿ ತರಬೇತಿಯನ್ನು ನೀಡಲಾಯಿತು, ಜೊತೆಗೆ ಒಂದು ಬಾಟಲ್ ವೇಸ್ಟ್ ಡಿಕಂಪೋಸರ್ ಸಹ ವಿತರಿಸಲಾಯಿತು. ಅವರು ತಮ್ಮ ಬೆಳೆಗಳಾದ ಕಬ್ಬು ಮತ್ತು ಬಾಳೆಗೆ ಈ ದ್ರಾವಣವನ್ನು ಸಿಂಪಡಿಸುತ್ತಿದ್ದು, ಪ್ರಸ್ತುತ ಎರಡೂ ಬೆಳೆ ಉತ್ತಮ ಬೆಳವಣಿಗೆ ಹೊಂದಿವೆ ಎನ್ನುತ್ತಾರೆ. ತಾವು ಇದರ ಸದುಪಯೋಗ ಪಡೆದುಕೊಂಡಿದ್ದಲ್ಲದೆ ತಮ್ಮ ಊರಿನ ಹಲವಾರು ರೈತರಿಗೆ ಮಾರ್ಗದರ್ಶಕರಾಗಿದ್ದಾರೆ. ಇವರಂತೆಯೇ ಕಂಪ್ಲಿ ಗ್ರಾಮದ ಹರೀಶ್ ಸಿಂಗ್ ಅವರೂ ಸಹ ವೇಸ್ಟ್ ಡಿಕಂಪೋಸರ್ ದ್ರಾವಣವನ್ನು ತಯಾರಿಸಿ ಮಲ್ಲಿಗೆ ಹಾಗೂ ಬಾಳೆ ಬೆಳೆಗೆ ಬಳಸಿರುತ್ತಾರೆ. ಇವರಿಗೂ ಸಹ ಉತ್ತಮ ಫಲಿತಾಂಶ ಕಂಡುಬರುತ್ತಿದೆ.

### ಏನಿದು ವೇಸ್ಟ್ ಡಿಕಂಪೋಸರ್?

ಇದೊಂದು ಸೂಕ್ಷ್ಮಾಣುಜೀವಿ ದ್ರಾವಣ. ಹಸುಗಳ ಸಗಣಿಯ ಲೋಳೆಯಲ್ಲಿ ಇರುವ (ಮ್ಯೂಕಸ್) ಸೂಕ್ಷ್ಮಾಣುಗಳನ್ನು ಬೇರ್ಪಡಿಸಿ ವೇಸ್ಟ್ ಡಿಕಂಪೋಸರ್ ತಯಾರಿಸಲಾಗುತ್ತದೆ. ಇಳುವರಿ ಹೆಚ್ಚಿಸಲು, ಕೀಟ/ರೋಗ ನಿಯಂತ್ರಿಸಲು, ತಿಪ್ಪೆ ಗೊಬ್ಬರವನ್ನು ಬೇಗ ಕಳಿಯುವಂತೆ ಮಾಡಲು, ಬೀಜೋಪಚಾರಕ್ಕೆ, ಹೊಲದಲ್ಲಿ ಬಿದ್ದ ತ್ಯಾಜ್ಯವನ್ನು ಬೇಗ ಕಳಿಯುವಂತೆ ಮಾಡಲು ಈ ದ್ರಾವಣ ಉಪಯುಕ್ತ. ಸಾಮಾನ್ಯವಾಗಿ ಹೊಲದಲ್ಲಿ ಬಿದ್ದ ತ್ಯಾಜ್ಯವು ಕಳಿತು ಗೊಬ್ಬರವಾಗಲು 100–120 ದಿವಸಗಳು ಬೇಕು.

ಆದರೆ ವೇಸ್ಟ್ ಡಿಕಂಪೋಸರ್ ಬಳಸಿದರೆ ಕೇವಲ 40–50 ದಿನಗಳಲ್ಲಿ ಗೊಬ್ಬರ ತಯಾರಿಸಬಹುದು. ಈ ವಿಧಾನವನ್ನು ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾವಯವ ಸಂಶೋಧನಾ ಕೇಂದ್ರ, ಗಾಜಿಯಾಬಾದ್, ಅಭಿವೃದ್ಧಿಪಡಿಸಿ ವಿತರಿಸುತ್ತಿದೆ.

## ಪ್ರಮುಖ ಲಕ್ಷಣಗಳು

- ಇದು ಕೈಗೆಟುಕುವ, ವಿಶ್ವಾಸಾರ್ಹ ಮತ್ತು ಬಳಸಲು ಸುಲಭವಾದ ವಿಧಾನ.
- ಸಂಗ್ರಹಿಸಲು ಸುಲಭ (3 ವರ್ಷಗಳವರೆಗೆ ಕೆಡುವುದಿಲ್ಲ)
- ಬಹುಬಳಕೆ ವಿಧಾನವಾಗಿದ್ದು ಎಲ್ಲಾ ಬೆಳೆಗಳು, ಎಲ್ಲಾ ರೀತಿಯ ಮಣ್ಣು, ಜೈವಿಕ ಕಳಿಸುವಿಕೆ ಮತ್ತು ಜೈವಿಕ ಕೀಟನಾಶಕವಾಗಿ ಬಳಸಬಹುದಾಗಿದೆ.

## ಸಾಮಾನ್ಯ ಪ್ರಯೋಜನಗಳು

- ಇದನ್ನು ಮಣ್ಣಿಗೆ ಹಾಕಿದ 21 ದಿನಗಳಲ್ಲಿ ಮಣ್ಣಿನ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಗಳನ್ನು ವರ್ಧಿಸುತ್ತದೆ
- ಬೀಜ ಮೊಳಕೆಯೊಡೆಯುವಿಕೆ, ಆರೋಗ್ಯಕರ ಬೆಳವಣಿಗೆ, ಉತ್ತಮ ಇಳುವರಿ ಮತ್ತು ಕಾಳಿನ ಗುಣಮಟ್ಟವನ್ನು ಸುಧಾರಿಸುತ್ತದೆ.
- ಕಾಂಪೋಸ್ಟ್ ಗೊಬ್ಬರದ ದಕ್ಷತೆಯನ್ನು ಹೆಚ್ಚಿಸುತ್ತದೆ ಮತ್ತು ಇದು ಕಡಿಮೆ ವೆಚ್ಚದಾಯಕವಾಗಿದೆ.

## ದ್ರಾವಣ ತಯಾರಿಸುವ ವಿಧಾನ

- 2 ಕೆ.ಜಿ ಬೆಲ್ಲವನ್ನು 200 ಲೀಟರ್ ನೀರು ಹಿಡಿಯುವ ಡ್ರಂನಲ್ಲಿ ಚೆನ್ನಾಗಿ ಕರಗಿಸಿ.
- ಬಾಟಲಿಯಲ್ಲಿರುವ ವೇಸ್ಟ್ ಡಿಕಂಪೋಸನ್ನು ನೀರಿಗೆ ಮಿಶ್ರ ಮಾಡಿ (ಕೈಯಿಂದ ಮುಟ್ಟಬಾರದು).
- ಡ್ರಂ ಅನ್ನು ಮುಚ್ಚಿ, ಮಿಶ್ರಣವನ್ನು ಪ್ರತಿದಿನ ಎರಡು ಸಲ ಕೋಲಿನಿಂದ ತಿರುಗಿಸಬೇಕು.
- 7 ದಿನಗಳ ನಂತರ ದ್ರಾವಣವು ಕೆನೆ ಬಣ್ಣಕ್ಕೆ ತಿರುಗುತ್ತದೆ. ಆಗ ಬಳಕೆಗೆ ಸಿದ್ದವಾಗಿದೆ ಎಂದರ್ಥ.
- 20 ಲೀಟರ್ ಈ ದ್ರಾವಣದಿಂದ ಪುನಃ 200 ಲೀಟರ್ ತಯಾರಿಸಿಕೊಳ್ಳಬಹುದು.

## ವೇಸ್ಟ್ ಡಿಕಂಪೋಸರ್ ಸಿದ್ಧಪಡಿಸಲು ಬೇಕಾಗುವ ಪದಾರ್ಥಗಳು

**ಬಳಸುವ ವಿಧಾನ:** ಡಿಕಂಪೋಸರ್ ದ್ರಾವಣಕ್ಕೆ ಅಷ್ಟೇ ಪ್ರಮಾಣದ ನೀರು ಬೆರೆಸಿ ಪ್ರತಿ 7 ದಿನಕ್ಕೊಮ್ಮೆ ಎಲ್ಲಾ ಬೆಳಗಳಿಗೆ ಸಿಂಪಡಿಸಬಹುದು. ಉದಾಹರಣೆಗೆ 50 ಲೀಟರ್ ದ್ರಾವಣಕ್ಕೆ 50 ಲೀಟರ್ ನೀರು ಬೆರೆಸುವುದು. ಬೆಳೆಗಳ ತ್ಯಾಜ್ಯ ಹಾಗೂ ಕಡ್ಡಿ–ಕಸ, ರವದಿಯು ಕಳಿಯುವಂತೆ ಮಾಡಲು ಈ ದ್ರಾವಣ ಉಪಯುಕ್ತ. ಸಾಮಾನ್ಯವಾಗಿ ಸಾವಯವ ವಸ್ತುಗಳು ಕಳಿತು ಗೊಬ್ಬರವಾಗಲು 100–120 ದಿವಸಗಳು ಬೇಕು. ಆದರೆ ವೇಸ್ಟ್ ಡಿಕಂಪೋಸರ್ ಬಳಸಿದರೆ ಕೇವಲ 40–50 ದಿನಗಳಲ್ಲಿ ಗೊಬ್ಬರ ತಯಾರಿಸಬಹುದು.










**1 ಬಾಟಲ್ ಡಿಕಂಪೋಸರ್** **2 ಕೇಜಿ ಬೆಲ್ಲ** **200 ಲೀ., ಡ್ರಮ್** **200 ಲೀಟರ್ ನೀರು**

## ತ್ಯಾಜ್ಯ ಕಳಿಸುವ ವಿಧಾನ

ಒಂದು ಟನ್ ತ್ಯಾಜ್ಯ ವಸ್ತುಗಳನ್ನು 15–20 ಸೆ.ಮೀ. ದಪ್ಪದ ಪದರದಲ್ಲಿ ನೆರಳಿನಲ್ಲಿ ಹರಡಿ. ಈ ತ್ಯಾಜ್ಯ ವಸ್ತುಗಳ ಮೇಲೆ 15–20 ಲೀಟರ್ ಡಿಕಂಪೋಸರ್ ಅನ್ನು ಸಿಂಪಡಿಸಿ. ಇನ್ನೂ ಒಂದು ಪದರ ತ್ಯಾಜ್ಯ ಹರಡಿ ಮತ್ತೆ ದ್ರಾವಣ ಸಿಂಪಡಿಸಿ. 3–4 ಪದರಗಳವರೆಗೆ ಮೇಲಿನ ಪ್ರಕ್ರಿಯೆನ್ನು ಪುನರಾವರ್ತಿಸಿ. ತ್ಯಾಜ್ಯವು ಚೆನ್ನಾಗಿ ಕಳಿತು ಗೊಬ್ಬರವಾಗುತ್ತದೆ.

## ಗೊಬ್ಬರದ ಫಲವತ್ತತೆ ಹೆಚ್ಚಿಸಲು

ತಿಪ್ಪೆ ಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರಕ್ಕೆ ಡಿಕಂಪೋಸರ್ ಸಿಂಪಡಿಸಿ. 60% ತೇವಾಂಶವನ್ನು ಕಾಪಾಡಿಕೊಳ್ಳಿ, 7 ದಿನಗಳ ಅಂತರದಲ್ಲಿ ಗೊಬ್ಬರವನ್ನು ತಿರುಗಿಸಿ ಹಾಕಿ. 30 ದಿನಗಳ ನಂತರ ಗೊಬ್ಬರವು ಬಳಸಲು ಸಿದ್ಧವಾಗಿರುತ್ತದೆ. ಹೊಲದಲ್ಲಿನ ತ್ಯಾಜ್ಯ ಅವಶೇಷಗಳನ್ನು ಕಳಿಸಲು ಒಂದು ಎಕರೆಗೆ 200 ಲೀಟರ್ ಡಿಕಂಪೋಸರ್ ದ್ರಾವಣವನ್ನು ಬೆಳೆಕೊಯ್ಲಿನ ನಂತರ ಇಡೀ ಹೊಲಕ್ಕೆ ಸಿಂಪಡಿಸಿ.

## ಬೀಜೋಪಚಾರ

50 ಗ್ರಾಂ ಬೆಲ್ಲವನ್ನು 200 ಮಿಲಿ ಲೀಟರ್ ನೀರಿನಲ್ಲಿ ಕುದಿಸಿ ಮತ್ತು ದ್ರಾವಣವನ್ನು ತಣ್ಣಗಾಗಿಸಿ. ಈ ದ್ರಾವಣಕ್ಕೆ 200 ಮಿಲಿಲೀಟರ್ ಡಿಕಂಪೋಸರ್ ಅನ್ನು ಮಿಶ್ರಣ ಮಾಡಿ. ಈ ದ್ರಾವಣದಿಂದ 20 ಕೇಜಿ ಬೀಜವನ್ನು ಉಪಚರಿಸಬಹುದು. ಬೀಜದ ಮೇಲೆ ದ್ರಾವಣವನ್ನು ಸಿಂಪಡಿಸಿ ಮತ್ತು ನಿಧಾನವಾಗಿ ಉಜ್ಜಿಕೊಳ್ಳಿ. ಸಂಸ್ಕರಿಸಿದ ಬೀಜಗಳನ್ನು ನೆರಳಿನಲ್ಲಿ 30 ನಿಮಿಷಗಳ ಕಾಲ ಬಿಡಿ. 30 ನಿಮಿಷಗಳ ನಂತರ ಬೀಜಗಳು ಬಿತ್ತನೆಗೆ ಸಿದ್ಧವಾಗಿರುತ್ತವೆ. ಎಲ್ಲಾ ಬೆಳೆಗಳಿಗೂ ಇದು ಉಪಯುಕ್ತ.

## ರೋಗನಿಯಂತ್ರಣಕ್ಕೆ

1:3 ಅನುಪಾತದೊಂದಿಗೆ ಡಿಕಂಪೋಸರ್ ದ್ರಾವಣ ಮತ್ತು ನೀರನ್ನು ಮಿಶ್ರ ಮಾಡಿ ಬೆಳೆಗೆ ಸಿಂಪಡಿಸಬಹುದು. 15 ದಿನಗಳ ಅಂತರದಲ್ಲಿ 5–6 ಬಾರಿ ಬೆಳೆಗೆ ಸಿಂಪಡಿಸಬೇಕು. ಇದು ವಿವಿಧ ಶಿಲೀಂಧ್ರ ಮತ್ತು ಬ್ಯಾಕ್ಟೀರಿಯ ರೋಗಗಳನ್ನು ನಿಯಂತ್ರಿಸುತ್ತದೆ.

## ವೇಸ್ಟ್ ಡಿಕಂಪೋಸರ್ ದ್ರಾವಣವನ್ನು ತಯಾರಿಸಲು ಮುನ್ನೆಚ್ಚರಿಕೆಗಳು

- ಗುಣಮಟ್ಟದ ದ್ರಾವಣವನ್ನು ಮಾತ್ರ ಬಳಸಿ, ದ್ರಾವಣದ ಬಣ್ಣವು ಬಿಳಿ, ಹಸಿರು ಅಥವಾ ಕಡು ಹಸಿರು ಆಗಿದ್ದರೆ ಉತ್ತಮವಾಗಿರುತ್ತದೆ. ಗುಲಾಬಿ, ಹಳದಿ, ಬಿಳಿ, ಕಪ್ಪು, ಕಂದು ಅಥವಾ ಯಾವುದೇ ಇತರ ಬಣ್ಣ ಇದ್ದರೆ ಬಳಸಬೇಡಿ.
- ಪ್ಲಾಸ್ಟಿಕ್ ಡ್ರಮ್ ಮಾತ್ರ ಬಳಸಿ.
- ಬೆರೆಸಲು (ಮಿಶ್ರ ಮಾಡಲು) ಮರದ ಕೋಲನ್ನು ಮಾತ್ರ ಬಳಸಿ.
- ತಯಾರಿಸಿದ ದ್ರಾವಣವನ್ನು ನೆರಳಿನಲ್ಲಿ ಸಂಗ್ರಹಿಸಿಡಿ.
- ದ್ರಾವಣಕ್ಕೆ ನಿಮ್ಮ ಬಾಯಿ ಅಥವಾ ಕೈಯನ್ನು ಒಡ್ಡಬೇಡಿ. ಇದು ಆರೋಗ್ಯಕ್ಕೆ ತೊಂದರೆ ಮಾಡಬಹುದು.



ಬಸವನ ದುರ್ಗದಲ್ಲಿ ವೇ.ಡಿ. ಪ್ರಾತ್ಯಕ್ಷಿಕೆ

ವಿ.ಎನ್.ಸಿ ಯೋಜನೆಯ ಸುಸ್ಥಿರ ಕೃಷಿ ಉತ್ತೇಜನ ಚಟುವಟಿಕೆಯಡಿಯಲ್ಲಿ ಈ ದ್ರಾವಣವನ್ನು ಪರಿಚಯಿಸಲಾಗುತ್ತಿದೆ. ಗಾಜಿಯಾಬಾದ್‌ನಿಂದ ಬಾಟಲಿಗಳನ್ನು ತರಿಸಿ ಆಸಕ್ತ ಕೃಷಿಕರಿಗೆ ವಿತರಿಸುತ್ತಿದ್ದು ಇದರ ಬಳಕೆ ಹಾಗೂ ಉಪಯುಕ್ತತೆ ಬಗ್ಗೆ ತರಬೇತಿ ಹಾಗೂ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ❖

# ಪ್ಯಾಕೇಜ್ 1ರ ಕಾಮಗಾರಿಗಳ ಫೋಟೋ ಆಲ್ಬಂ



ಕಾರ್ಯಪಾಲಕ ಇಂಜಿನಿಯರ್ ಶ್ರೀ ಕೆ.ಬಿ.ಹೆಚ್. ಶಿವಶಂಕರ್ ಅವರು ಬೆಳಗೋಡಹಾಳ್ ಕಾಲುವೆ ಕಾಮಗಾರಿ ವೀಕ್ಷಣೆ ಮಾಡುತ್ತಿರುವುದು.



ವಡ್ಡೇರಹಟ್ಟಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಶ್ರೀ ಗೋಡೇಕರ್ ಅವರು ಅಂಜನಾದ್ರಿ ಕಾಲುವೆ ಕಾಮಗಾರಿ ವೀಕ್ಷಣೆ ಮಾಡುತ್ತಿರುವುದು.



ಗಂಗಾವತಿ ಮೇಲಣ ಕಾಲುವೆ ಕಾಮಗಾರಿ ಪ್ರಗತಿಯಲ್ಲಿ



ಆನೆಗುಂದಿ ಮುಖ್ಯ ಕಾಲುವೆಯಲ್ಲಿ ಅಂಜನಾದ್ರಿ ಬೆಟ್ಟದ ಬಳಿ ಬೃಹತ್ ಆಲದ ಮರವನ್ನು ಉಳಿಸಿಕೊಂಡು ಲೈನಿಂಗ್ ಮಾಡಲಾಗಿದೆ.




ಪ್ಯಾಕೇಜ್ 1ರ 15 ಮುಖ್ಯ ಕಾಲುವೆಗಳಲ್ಲಿ ಗುತ್ತಿಗೆದಾರರು ಮಾಹಿತಿ ಫಲಕವನ್ನು ಅಳವಡಿಕೆ ಮಾಡಿರುವುದು

# ಪ್ಯಾಕೇಜ್ 2ರ ಕಾಮಗಾರಿಗಳ ಫೋಟೋ ಆಲ್ಬಂ



ಕಂಪ್ಲಿ ಅಣೆಕಟ್ಟು ಕಾಮಗಾರಿಗಳನ್ನು ಪರಿಸರ ತಜ್ಞರಾದ ಶ್ರೀ ಸಮದ್ ಕೊಟ್ಟೂರು ಅವರು ವೀಕ್ಷಣೆ ಮಾಡುತ್ತಿರುವುದು.



ಮುಖ್ಯ ಇಂಜಿನಿಯರ್ ಶ್ರೀ ಕೆ.ದುರುಗಪ್ಪ ಅವರು ಗಂಗಾವತಿ ಕೆಳಗಣ ಅಣೆಕಟ್ಟು ಕಾಮಗಾರಿಗಳ ನಕ್ಷೆಗಳನ್ನು ಸ್ಥಳದಲ್ಲಿಯೇ ವೀಕ್ಷಣೆ ಮಾಡುತ್ತಿರುವುದು.

ಬೆಲ್ಲಾ (ಹೊಸೂರು) ಅಣೆಕಟ್ಟು ಕಾಮಗಾರಿ ಪ್ರಗತಿಯಲ್ಲಿ





ಮುಖ್ಯ ಇಂಜಿನಿರ್ ಅವರ ನೇತೃತ್ವದಲ್ಲಿ ಅಧೀಕ್ಷಕ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಕಾರ್ಯಪಾಲಕ ಇಂಜಿನಿಯರ್, ವಡ್ಡೇರಹಟ್ಟಿ ವಿಭಾಗ ಹಾಗೂ ಇತರ ಇಂಜಿನಿಯರುಗಳು ಪ್ಯಾಕೇಜ್ 2ರ ಅಡಿಯಲ್ಲಿ ಅನುಷ್ಟಾನಗೊಳ್ಳುತ್ತಿರುವ ಗಂಗಾವತಿ ಮೇಲಣ ಅಣೆಕಟ್ಟು ಕಾಮಗಾರಿಗಳನ್ನು ವೀಕ್ಷಿಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.




ತುರ್ತಾ ಅಣೆಕಟ್ಟು ಕಾಮಗಾರಿ ಪ್ರಗತಿಯಲ್ಲಿ

## ಆಕಾಶವಾಣಿ ಮೂಲಕ ಯೋಜನಾ ಮಾಹಿತಿ ಪ್ರಸರಣ

ಯೋಜನಾ ವತಿಯಿಂದ ನಿರ್ಮಿಸಿ ಪ್ರಸಾರವಾದ 'ಜಲವಾಣಿ' ರೇಡಿಯೋ ಸರಣಿ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯವಾಯಿತು. 2023ರ ಫೆಬ್ರವರಿ ತಿಂಗಳಲ್ಲಿ ಆರಂಭವಾಗಿ ಏಪ್ರಿಲ್‌ವರೆಗೆ 10 ಸಂದರ್ಶನಗಳು ಪ್ರಸಾರವಾದವು. ಇಲಾಖೆ ಅಧಿಕಾರಿಗಳು, ನೀರು ಬಳಕೆದಾರರ ಸಹಕಾರ ಸಂಘಗಳ ಪದಾಧಿಕಾರಿಗಳು, ಮಹಿಳೆಯರು, ಪ್ರಗತಿಪರ ಕೃಷಿಕರು ಹಾಗೂ ಯೋಜನಾ ಸಮಾಲೋಚಕ ತಂಡದ ತಜ್ಞರುಗಳು ಸಂದರ್ಶನಗಳಲ್ಲಿ ಭಾಗವಹಿಸಿ ವೈವಿಧ್ಯಮಯ ಮಾಹಿತಿಯನ್ನು ವಿನಿಮಯ ಮಾಡಿಕೊಂಡಿದ್ದು ವಿಶೇಷ. ಅವುಗಳ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಸರಣಿ ಸಂಖ್ಯೆ | ವಿಷಯ | ಸಂಪನ್ಮೂಲ ವ್ಯಕ್ತಿಗಳು | ಪ್ರಸಾರ ದಿನಾಂಕ |
|---|---|---|---|
| 1 | ವಿ.ಎನ್.ಸಿ ಯೋಜನಾ ಪರಿಚಯ, ಇತಿಹಾಸ, ಉದ್ದೇಶಗಳು, ಚಟುವಟಿಕೆಗಳು ಇತ್ಯಾದಿ | ಶ್ರೀ ದುರುಗಪ್ಪ ಕೆ, ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್ | 15.2.2023 |
| 2 | ಸಮಗ್ರ ಜಲಸಂಪನ್ಮೂಲ ನಿರ್ವಹಣೆ ಮತ್ತು ವಿ.ಎನ್.ಸಿ ಯೋಜನೆಯಲ್ಲಿ ಅದರ ಅಳವಡಿಕೆ | ಶ್ರೀ ಆರ್.ದೊರೈಸ್ವಾಮಿ, ಟೀಮ್ ಲೀಡರ್, ಇಜಿಐಎಸ್ | 22.2.2023 |
| 3 | ವಿ.ಎನ್.ಸಿ ಯೋಜನೆಯಲ್ಲಿ ಸಾಮಾಜಿಕ ಮತ್ತು ಪರಿಸರ ಸುರಕ್ಷೆ | ಡಾ.ಸಮದ್ ಕೊಟ್ಟೂರು, ಪರಿಸರ ತಜ್ಞರು, ಮತ್ತು ಶ್ರೀ ದೀಪಕ್ ಕುಮಾರ್, ಕಾಮಗಾರಿ ನಿರ್ವಹಣೆ ಇಂಜಿನಿಯರ್, ಇಜಿಐಎಸ್ | 1.3.2023 |
| 4 | ವಿ.ಎನ್.ಸಿ ಯೋಜನೆಯಲ್ಲಿ ಕಾಡಾ ಕಾಮಗಾರಿಗಳ ಅವಶ್ಯಕತೆ | ಶ್ರೀ ಶಿವಶಂಕರ್ ಕೆ.ಬಿ.ಹೆಚ್., ಕಾರ್ಯಪಾಲಕ ಇಂಜಿನಿಯರ್, ನಂ. 1 ಟಿ.ಆರ್ ವಿಭಾಗ | 18.3.2023 |
| 5 | ವಿ.ಎನ್.ಸಿ ಯೋಜನೆಯಲ್ಲಿ ನೀ.ಬ.ಸ.ಸಂ.ಗಳ ಸಂಘದ ಸುಸ್ಥಿರತೆ | ಶ್ರೀ ಗುರುರಾಜ್, ಸಿ.ಇ.ಓ, ನೀರು ಬಳಕೆದಾರರ ಸಹಕಾರ ಸಂಘ, ರಾಮಸಾಗರ | 15.3.2023 |
| 6 | ನೀ.ಬ.ಸ.ಸಂಘಗಳಲ್ಲಿ ಹಣಕಾಸು ನಿರ್ವಹಣೆ | ಶ್ರೀ ರಾಮಪ್ರಸಾದ್ ಜಿ, ಲೆಕ್ಕ ಅಧೀಕ್ಷಕರು, ಇಜಿಐಎಸ್ | 22.3.2023 |
| 7 | ನೀ.ಬ.ಸ. ಸಂಘದ ಅಧ್ಯಕ್ಷೆಯಾಗಿ ನನ್ನ ಅನುಭವ | ಶ್ರೀಮತಿ ಪದ್ದಮ್ಮ, ಅಧ್ಯಕ್ಷರು, ನರಸಾಪುರ ನೀರು ಬಳಕೆದಾರರ ಸಹಕಾರ ಸಂಘ, | 29.3.2023 |
| 8 | ವಿ.ಎನ್.ಸಿ ಯೋಜನೆಯಲ್ಲಿ ಮಹಿಳಾ ಭಾಗವಹಿಸುವಿಕೆ ಮತ್ತು ಜೀವನಾಧಾರ ಚಟುವಟಿಕೆಗಳು | ಕುಮಾರಿ ಪದ್ಮ ಮತ್ತು ಶ್ರೀ ಸಿದ್ದೇಶ್, ಸಮುದಾಯ ಸಂಘಟಕರು, ಇಜಿಐಎಸ್ | 5.4.2023 |
| 9 | ವಿ.ಎನ್.ಸಿ ಯೋಜನೆಯಲ್ಲಿ ಸುಸ್ಥಿರ ಕೃಷಿ ಚಟುವಟಿಕೆಗಳು ಮತ್ತು ಅವುಗಳ ಮಹತ್ವ | ಶ್ರೀ ಫಣಿಶಾಹಿ, ಪ್ರಗತಿಪರ ರೈತರು ಮತ್ತು ಶ್ರೀ ಶರಣ್, ಕೃಷಿ ವಿಸ್ತರಣಾ ಅಧಿಕಾರಿ, ಇಜಿಐಎಸ್ | 12.4.2023 |
| 10 | ವಿ.ಎನ್.ಸಿ ಯೋಜನೆಯಲ್ಲಿ ಗುಣ ನಿಯಂತ್ರಣ ಚಟುವಟಿಕೆಗಳು | ಶ್ರೀ ಗುರುರಾಜ್ ಸಿ, ಕಾರ್ಯಪಾಲಕ ಇಂಜಿನಿಯರ್, ಗುಣನಿಯಂತ್ರಣ ವಿಭಾಗ, ಮುನಿರಾಬಾದ್ | 19.4.2023 |

## ವಿಜಯನಗರ ಕಾಲುವೆ ಕಾಮಗಾರಿಗಳ ಭೌತಿಕ ಪ್ರಗತಿ ವಿವರ–ಪ್ಯಾಕೇಜ್ 1 (ಏಪ್ರಿಲ್ 2023ರ ಅಂತ್ಯಕ್ಕೆ)

| ಕ್ರ. ಸಂ | ಕಾಲುವೆ ಹೆಸರು | ಲೈನಿಂಗ್(ಕಿ.ಮೀ.,) | | ಪ್ರಗತಿ % | ರಚನೆಗಳು (ಸಂಖ್ಯೆ) | | ಪ್ರಗತಿ % |
|---|---|---|---|---|---|---|---|
| | | ಗುರಿ | ಸಾಧನೆ | % | ಗುರಿ | ಸಾಧನೆ | % |
| 1 | ರಾಯ | 27.74 | 13.82 | 50 | 120 | 45 | 38 |
| 2 | ಬಸವಣ್ಣ | 16.50 | 12.43 | 70 | 74 | 36 | 46 |
| 3 | ಬೆಲ್ಲಾ | 5.50 | 3.93 | 58 | 57 | 38 | 70 |
| 4 | ಕಾಳಘಟ್ಟ | 7.02 | 5.97 | 84 | 49 | 23 | 45 |
| 5 | ರಾಮಸಾಗರ | 15.50 | 12.28 | 79 | 62 | 100 | 124 |
| 6 | ಕಂಪ್ಲಿ | 23.55 | 9.84 | 31 | 148 | 60 | 28 |
| 7 | ಬೆಳಗೋಡಹಾಳ್ | 11.38 | 00 | 00 | 119 | 01 | 00 |
| 8 | ದೇಶನೂರು | 9.03 | 7.13 | 79 | 31 | 14 | 45 |
| 9 | ಸಿರುಗುಪ್ಪ | 10.85 | 9.30 | 86 | 18 | 18 | 105 |
| 10 | ಹುಲಿಗಿ | 10.69 | 9.05 | 78 | 84 | 38 | 45 |
| 11 | ಶಿವಪುರ | 6.54 | 6.54 | 96 | 42 | 28 | 67 |
| 12 | ಆನೆಗುಂದಿ | 19.44 | 10.99 | 31 | 119 | 50 | 36 |
| 13 | ಗಂಗಾವತಿ ಮೇಲ್ದಂಡೆ | 9.00 | 2.11 | 22 | 74 | 9 | 12 |
| 14 | ಗಂಗಾವತಿ ಕೆಳದಂಡೆ | 9.54 | 2.51 | 25 | 62 | 15 | 24 |
| 15 | ಬಿಚ್ಚಾಲಿ | 14.50 | 3.47 | 24 | 30 | 7 | 23 |
| | **ಒಟ್ಟು** | **196.78** | **109.37** | **56.00** | **1089** | **482** | **44.26** |

**(ಸೂಚನೆ :– ತುರ್ತಾ ಕಾಲುವೆ ಕಾಮಗಾರಿಗಳನ್ನು ಪ್ಯಾಕೇಜ್ II ರಲ್ಲಿ ತೆಗೆದುಕೊಳ್ಳಲಾಗಿದೆ)**

### ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಯೋಜನಾ ಸಹಾಯಕ ಸಮಾಲೋಚಕ ತಂಡ**
ಇಜಿಐಎಸ್, ನಂ 87, ಸೀತಾ ಕುಂಜ,
5ನೇ ಅಡ್ಡರಸ್ತೆ, ಮೃತ್ಯುಂಜಯನಗರ
ಹೊಸಪೇಟೆ–583201, ವಿಜಯನಗರ ಜಿಲ್ಲೆ

**ಕರ್ನಾಟಕ ನೀರಾವರಿ ನಿಗಮ ನಿ.**
ಯೋಜನಾ ಅನುಷ್ಠಾನ ಕಛೇರಿ
ಮುನಿರಾಬಾದ್, ಕೊಪ್ಪಳ–583233

**ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ತುಂಗಭದ್ರಾ ಯೋಜನೆ
ಮುನಿರಾಬಾದ್, ಕೊಪ್ಪಳ–583233


### ಸಂಪಾದಕೀಯ ಮಂಡಳಿ

**ಶ್ರೀ ದುರುಗಪ್ಪ ಕೆ.,** ಮುಖ್ಯ ಇಂಜಿನಿಯರ್,
ನೀರಾವರಿ ಕೇಂದ್ರ ವಲಯ,
ಮುನಿರಾಬಾದ್

**ಶ್ರೀ ಸೈಯದ್ ಐಸಾಕ್ ಅಪ್ಸರ್,**
ಆಡಳಿತಾಧಿಕಾರಿಗಳು, ತುಂಗಭದ್ರಾ ಕಾಡಾ

**ಶ್ರೀ ದೊರೈಸ್ವಾಮಿ ಆರ್.**
ಟೀಮ್ ಲೀಡರ್, ಯೋಜನಾ ಸಹಾಯಕ
ಸಮಾಲೋಚಕ ತಂಡ, ಇಜಿಐಎಸ್


ಶ್ರೀ ನಂಜುಂಡೇಶ್ವರ ಪ್ರಿಂಟರ್ಸ್, ಬೆಂಗಳೂರು–10